# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.14/ಪಿಆರ್: 14 :2020-21 ದಿನಾಂಕ: 11.05.2021

## ಬಾಗಲಗುಂಟೆ ವಾರ್ಡ್-14ರ ವಾರ್ಡ್ ಸಭೆಯ (Ward Decentralized Traige and Emergency Response (DETER) Committee for COVID-19) ನಡವಳಿ

ದಿ.11.05.2021 ರಂದು ಬೆಳಗ್ಗೆ 11.30 ಗಂಟೆಗೆ ಶ್ರೀ.ಕೆ.ಮರುಳಸಿದ್ದಪ್ಪ, ವಾರ್ಡ್ ಕಮಿಟಿ ನೋಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದವರು:**

1. ಶ್ರೀ.ಮೋಹನ್, ಹಿರಿಯ ಆರೋಗ್ಯ ಪರಿವೀಕ್ಷಕರು,. ಬಾಗಲಗುಂಟೆ ಹಾಗೂ ವಾರ್ಡ್ ಸಮಿತಿ ಸದಸ್ಯರು
2. ಶ್ರೀ.ಕಮಲ್ ಗಡ್ಡಿಮನಿ, ಕಿರಿಯ ಆರೋಗ್ಯ ಪರಿವೀಕ್ಷಕರು,ಬಾಗಲಗುಂಟೆ ಹಾಗೂ ವಾರ್ಡ್ ಸಮಿತಿ ಸದಸ್ಯರು
3. ಶ್ರೀ.ಸಿ.ಬಿ.ಕೃಷ್ಣಪ್ಪ, ಅರಣ್ಯ ಇಲಾಖೆ, ಬಿಬಿಎಂಪಿ, ಬೆಂಗಳೂರು
4. ಶ್ರೀ.ಶಿವಲಿಂಗೇಗೌಡ, ತೋಟಗಾರಿಕೆ ಇಲಾಖೆ, ಬಿಬಿಎಂಪಿ, ಬಾಗಲಗುಟೆ
5. ಡಾ|| ಚಂದನ, ಕೋವಿಡ್ ಮೆಡಿಕಲ್ ಆಫೀಸರ್, ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಗಲಗುಂಟೆ
6. ಡಾ|| ವರುಣ್ ಕುಮಾರ್, ಕೋವಿಡ್ ಮೆಡಿಕಲ್ ಆಫೀಸರ್, ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಗಲಗುಂಟೆ
7. ಶ್ರೀ.ಎನ್.ಚಂದ್ರಯ್ಯ, ಮೌಲ್ಯಮಾಪಕರು, ವಾರ್ಡ್ ನಂ.14&15
8. ಶ್ರೀ.ಗಣೇಶ್ ಡಿ.ಎಂ. ಸೆಕ್ಟರ್ ಆಫೀಸರ್ ಬಾಗಲಗುಂಟೆ
9. ಶ್ರೀ.ಸಂಪದ ಕೆರಿಮನಿ, ಸೆಕ್ಟರ್ ಆಫೀಸರ್ ಬಾಗಲಗುಂಟೆ
10. ಶ್ರೀ.ಬಿಲಾಲ್ ಎಂ.ಜಿ, ವಾರ್ಡ್ ನೊಡೆಲ್ ಅಧಿಕಾರಿ (ಕೋವಿಡ್-19)
11. ಶ್ರೀ.ಕೃಷ್ಣಮೂರ್ತಿ ಬಿ, ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ದಿ ಸಂಘ
12. ಶ್ರೀ.ಲಕ್ಷ್ಮಿ ವೆಂಕಟೇಶ್, ಮುನಿಕೊಂಡಪ್ಪ ಬಡಾವಣೆ, ನಾಗರೀಕ ಹಿತ ರಕ್ಷಣಾ ಸಮಿತಿ.
13. ಶ್ರೀ.ಮುದ್ದ ಹನುಮೇಗೌಡರು ನಾಗರೀಕ ಹಿತ ರಕ್ಷಣಾ ಸಮಿತಿ ಸದಸ್ಯರು, ಸಿಡೇದಹಳ್ಳಿ
14. ಶ್ರೀ. ಸದಾಶಿವ, ನಾಗರೀಕ ಹಿತ ರಕ್ಷಣಾ ಸಮಿತಿ.
15. ಶ್ರೀ. ಬಿ.ಟಿ.ಎಲ್ ವೆಂಕಟೇಶ್, ನಾಗರೀಕ ಹಿತ ರಕ್ಷಣಾ ಸಮಿತಿ.
16. ಶ್ರೀ. ರೇಣುಕಪ್ಪ, ನಾಗರೀಕ ಹಿತ ರಕ್ಷಣಾ ಸಮಿತಿ.

ಶ್ರೀ.ಕೆ.ಮರುಳಸಿದ್ದಪ್ಪ, ನೋಡೆಲ್ ಅಧಿಕಾರಿ, ವಾರ್ಡ್ ನಂ.14, ಬಾಗಲಗುಂಟೆ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ದಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1. **ವಾರ್ಡ್ ಮಟ್ಟದಲ್ಲಿ WDC (Ward Decentralized Triage and Emergency Response (DETER) Committee for Covid 19 Management) ಸಮಿತಿಯನ್ನು ಸ್ಥಾಪಿಸುವ ಬಗ್ಗೆ:-**

ನೋಡಲ್ ಅಧಿಕಾರಿ ರವರು ಮಾತನಾಡಿ ಸರ್ಕಾರದ ಆದೇಶ ಸಂಖ್ಯೆ No: RD 158 TNR 2020 (1) ದಿನಾಂಕ: 07.05.2021 ರಲ್ಲಿ ಬೆಂಗಳೂರಿನಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮ ಹಾಗೂ ಈ ಕುರಿತು ವಾರ್ಡ್ ಮಟ್ಟದಲ್ಲಿ Covid Care Center, Triage ಕೇಂದ್ರಗಳನ್ನು ಸ್ಥಾಪಿಸಲು ಸೂಚಿಸಿರುವ ಬಗ್ಗೆ ಸಭೆಯ ಗಮನಕ್ಕೆ ತಂದು ವಿವರವಾಗಿ ಚರ್ಚಿಸಲಾಯಿತು.



Scanned by CamScanner

## A. Triage ಕೇಂದ್ರ ಸ್ಥಾಪಿಸುವ ಕುರಿತು:-

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದು, ಸದರಿ ಪ್ರಕರಣಗಳ ಗಂಭೀರತೆಯನ್ನು ಆಧರಿಸಿ ಚಿಕಿತ್ಸೆಗೆ ಶಿಫಾರಸ್ಸು ಮಾಡುವ ಉದ್ದೇಶದಿಂದ ವಾರ್ಡ್ ಮಟ್ಟದಲ್ಲಿ Triage ಕೇಂದ್ರ ಸ್ಥಾಪಿಸುವ ಕುರಿತು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಲಭ್ಯವಿರುವ ಸೂಕ್ತ ಸರ್ಕಾರಿ ಕಟ್ಟಡ / ಸಮುದಾಯ ಭವನದ ಬಗ್ಗೆ ಚರ್ಚಿಸಲಾಯಿತು. ವಾರ್ಡ್ ನಂ. 14ರ ವ್ಯಾಪ್ತಿಯಲ್ಲಿ ವಾರ್ಡ್ ನಂ. 13ರ ಇಂದಿರಾ ಕ್ಯಾಂಟೀನ್ ಪಕ್ಕದಲ್ಲಿ ಬಿಬಿಎಂಪಿ ವತಿಯಿಂದ ನೂತನವಾಗಿ ನಿರ್ಮಿಸಿರುವ ಡಯಾಲಿಸಿಸ್ ಕಟ್ಟಡಕ್ಕೆ ನೀರು ಸರಬರಾಜು, ಒಳ ಚರಂಡಿ ಮತ್ತು ವಿದ್ಯುತ್ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸದರಿ ಕಾಮಗಾರಿಗಳಿಗೆ ಮೇಲಾಧಿಕಾರಿಗಳಿಂಥ ಅನುಮೋದನೆ ಪಡೆದು ಕಾಮಗಾರಿ ಶಾಖೆಯಿಂದ ನಿರ್ಮಿಸಲಾಗುವುದೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಮುಂದುವರೆದು, ದಿನಾಂಕ: 12.05.2021 ರಂದು ದಾಸರಹಳ್ಳಿ ವಲಯದ ಆರೋಗ್ಯ ವೈದ್ಯಾಧಿಕಾರಿಗಳೊಂದಿಗೆ ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಚರ್ಚಿಸಲಾಗಿ, ದಾಸರಹಳ್ಳಿ ವಲಯದಲ್ಲಿ Triage ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ದಿನಾಂಕ: 11.05.2021 ರಂದು ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ವಾರ್ಡ್ ನಂ. 14 ಬಾಗಲಗುಂಟೆಗೆ ಸಂಬಂಧಿಸಿದಂತೆ, ಕಾರ್ಮಿಕ ಇಲಾಖೆಯ ಕಟ್ಟಡದಲ್ಲಿ ಸ್ಥಾಪಿಸಿರುವ ಕೋವಿಡ್ ಕೇರ್ ಸೆಂಟರ್‌ನ ಆವರಣದಲ್ಲಿನ ಸೂಕ್ತ ಕಟ್ಟಡದಲ್ಲಿ Triage ಕೇಂದ್ರ ಆರಂಭಿಸಲು ತೀರ್ಮಾನಿಸಿರುವುದಾಗಿ ತಿಳಿಸಿರುತ್ತಾರೆ.

**(ಕ್ರಮ:** ಸಹಾಯಕ ಕಾರ್ಯನಿರ್ವಾಹಕ ಅಬೀಯಂತರರು (ದಾಸರಹಳ್ಳಿ) ಉಪ ವಿಭಾಗ ಮತ್ತು ಆರೋಗ್ಯ ವೈದ್ಯಾಧಿಕಾರಿಗಳು (ದಾಸರಹಳ್ಳಿ ವಲಯ)

## B. ವಾರ್ಡ್ ಹಂತದಲ್ಲಿ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸುವ ಕುರಿತು:-

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ವಾರ್ಡ್ ಮಟ್ಟದಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಉದ್ದೇಶಕ್ಕೆ ಸೂಕ್ತ ಕಟ್ಟಡದ ಅವಶ್ಯಕತೆಯಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕಾರ್ಮಿಕ ಇಲಾಖೆ ಕಟ್ಟಡದಲ್ಲಿ ಈಗಾಗಲೇ 130 ಹಾಸಿಗೆ ಸಾಮರ್ಥ್ಯದ ಆರೈಕೆ ಕೇಂದ್ರ ಪ್ರಾರಂಭಿಸಲಾಗಿದ್ದು, ಸದರಿ ಕಟ್ಟಡದಲ್ಲಿ ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಅಗತ್ಯ ಬಿದ್ದಲ್ಲಿ ಕಾರ್ಮಿಕ ಇಲಾಖೆಯ ಕಟ್ಟಡ ಸಂಕೀರ್ಣದಲ್ಲಿನ ಇನ್ನೊಂದು ಕಟ್ಟಡದಲ್ಲಿ ವಾರ್ಡ್ ಹಂತದ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸುವ ಕುರಿತು ಅಗತ್ಯ ಕ್ರಮ ವಹಿಸುವ ಬಗ್ಗೆ ಚರ್ಚಿಸಲಾಯಿತು.

**(ಕ್ರಮ:** ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ದಾಸರಹಳ್ಳಿ) ಉಪ ವಿಭಾಗ ಮತ್ತು ಆರೋಗ್ಯ ವೈದ್ಯಾಧಿಕಾರಿಗಳು (ದಾಸರಹಳ್ಳಿ ವಲಯ)

## C. ಕೋವಿಡ್‌ಗೆ ಸಂಬಂಧಿಸಿದಂತೆ, ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಲು ಸ್ವಯಂ ಸೇವಕರು ರವರುಗಳನ್ನು ನೀಯೋಜಿಸಿಕೊಳ್ಳುವ ಬಗ್ಗೆ:-

ಸರ್ಕಾರದ ಆದೇಶದಲ್ಲಿ ಸ್ವಯಂ ಸೇವಕರ ಪಾತ್ರ / ಕರ್ತವ್ಯದ ಬಗ್ಗೆ ವಿನಂತಿಸಿರುವುದನ್ನು ಚರ್ಚಿಸಲಾಯಿತು. ವಾರ್ಡ್ ವ್ಯಾಪ್ತಿಯ ಪ್ರತಿ ಬಡಾವಣೆಯಲ್ಲಿ ಕನಿಷ್ಟ 10 ಜನ ಸ್ವಯಂ ಸೇವಕರನ್ನು ಗುರುತಿಸಿ, (ವಾರ್ಡ್ ವ್ಯಾಪ್ತಿಯಲ್ಲಿ ಕನಿಷ್ಟ 50) ಪಟ್ಟಿಯನ್ನು ನೀಡುವಂತೆ ವಾರ್ಡ್ ಸಭೆಯ ಸದಸ್ಯರಿಗೆ ತಿಳಿಸಲಾಯಿತು.

**(ಕ್ರಮ:** ವಾರ್ಡ್ ಸಮಿತಿ ಸದಸ್ಯರು / ಹಿರಿಯ ಆರೋಗ್ಯ ಪರಿವೀಕ್ಷಕರು)



Scanned by CamScanner

D. ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ / ವಾಸಿಸುತ್ತಿರುವ ಬಿಬಿಎಂಪಿ ವೈದ್ಯರು / ದಂತ ವೈದ್ಯರು / ನರ್ಸಿಂಗ್ ಅಥವಾ ಆಯುಷ್ ವೈದ್ಯರು ರವರುಗಳ ಮಹಿತಿಯನ್ನು ಕಲೆ ಹಾಕಲು ಮತ್ತು ಒದಗಿಸುವಂತೆ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ಹಾಜರಿದ್ದ 'ಸದಸ್ಯರು ಮತ್ತು ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

**(ಕ್ರಮ:** ವಾರ್ಡ್ ಸಮಿತಿ ಸದಸ್ಯರು, ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು)

**E. ಇತರೆ ವಿಷಯಗಳ ಬಗ್ಗೆ.**

1. ಕೋವಿಡ್ ನಿಯಂತ್ರಣದ ಕುರಿತು ಜಾಗೃತಿ ಮೂಡಿಸಲು ನಿಯೋಜಿಸಲಗಿರುವ ಸೆಕ್ಟರ್ ಆದಿಕಾರಿಗಳ ಸಭೆಯಲ್ಲಿ ಮಾತನಾಡಿ ತಮಗೆ ಮತ್ತು ಬಿ.ಎಲ್.ಓ ಗಳಿಗೆ ತಮ್ಮ ಕರ್ತವ್ಯದ ಅವಧಿಯಲ್ಲಿ ಉಪಯೋಗಿಸಲು ಮಾಸ್ಕ್, ಸ್ಯಾನಿಟೈಸರ್ ಇತ್ಯಾದಿಗಳನ್ನು ಒದಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಧ್ವನಿಗೂಡಿಸಿ ಈ ಬಗ್ಗೆ ಅಗತ್ಯ ಕ್ರಮ ವಹಿಸುವ ಬಗ್ಗೆ ಚರ್ಚಿಸಲಾಯಿತು.

**(ಕ್ರಮ:** ಆರೋಗ್ಯ ವೈಧ್ಯಾಧಿಕಾರಿಗಳು / ಹಿರಿಯ ಆರೋಗ್ಯ ಪರಿವೀಕ್ಷಕರು)

2. **ವಾರ್ಡ್ ವ್ಯಾಪ್ತಿಯಲ್ಲಿ ಗಿಡ / ಸಸಿಗಳನ್ನು ನೆಡುವ ಬಗ್ಗೆ:-**
ಮಳೆಗಾಲ ಪ್ರಾರಂಭವಾಗುತ್ತಿದ್ದು, ಗಿಡಗಳನ್ನು ನೆಡುವ ಬಗ್ಗೆ ಚರ್ಚಿಸಲಾಯಿತು. ಸದರಿ ಸಭೆಯಲ್ಲಿ ಕಳೆದ ವರ್ಷ ನೆಡಲಾದ ಸಸಿಗಳು, ಸಸಿಗಳ ಸಂಖ್ಯೆ, ಪೋಷಣೆ ಇವುಗಳ ಬಗ್ಗೆ ಚರ್ಚಿಸಲಾಯಿತು ಹಾಗೂ ಪ್ರಸಕ್ತ ಸಾಲಿನಲ್ಲಿ ಗಿಡಗಳನ್ನು ನೆಡುವುದರ ಬಗ್ಗೆ ಕ್ರಮ ವಹಿಸಲು ಚರ್ಚಿಸಲಾಯಿತು.

**(ಕ್ರಮ:** ವಲಯ ಅರಣ್ಯಾಧಿಕಾರಿಗಳು)

12/08/2021

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 14, ಬಾಗಲಗುಂಟೆ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

12/08/2021

**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14, ಬಾಗಲಗುಂಟೆ**
**ಮತ್ತು ಕಾರ್ಯಪಾಲಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

<u>ಅಧಿಕಾರಿಗಳ ಮಾಹಿತಿಗಾಗಿ:-</u>

1) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
11) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 14 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಛೇರಿ ಪ್ರತಿ.



REDMI NOTE 6 PRO
MI DUAL CAMERA
Scanned by CamScanner